1887ನೇ ಇಸವಿ ಜುಲೈ ತಿಂಗಳು 7ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯ ಬಂದ ಅವರುಗಳ ವಾಸಸ್ಥಳ.	ಕೊಡಬೇಕಾಗಿ ಯೊಪ್ಪಿದ ಹಣ.			ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇವ್ಪರೆ.	ಷರಾ.
1	ಮೈಸೂರು ತಾಲ್ಲೂಕು ದ್ಯಾವಯ್ಯನ ಹುಂಡೀಲಿರುವ ಹೊನ್ನಿ	30	0	0	ಡಿಕ್ರೀ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ.

ಫೈರ್‌ಬ್ರಾಕ್ಸ್ ಸಬ್ ಡಿವೀಜ್ಯ.

ತಾರೀಖು 12ನೇ ಜುಲೈ 1887.

ಫೈರ್‌ಬ್ರಾಕ್ಸ್ ಸಬ್ ಡಿವೀಜ್ಯ ಅತ್ತಿಕುಪ್ಪಾ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜನ್ನು ಕ್ರಮಪ್ರಕಾರ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುಖ್ತಾರೀಕರಾಗಲಿ ಈ ತಾರೀಖು ಲಾಗಾಯತು ಮೂವತ್ತು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ರಿಜಿಸ್ಟ್ರೇಷನ್ ನಂ.	ಬರದುಕೊಟ್ಟವನ ಹೆಸರು.	ಬರಸಿಕೊಂಡವನ ಹೆಸರು.	ದಸ್ತಾವೇಜು ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾಗಿ ಸಹಿ ಮಾಡಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1885-86ನೇ ಇಸವಿ ನಂಬರ್ 144	ಕನ್ನಂಬಾಡಿ ಕಸಬಾ ಗ್ರಾಮದಲ್ಲಿರುವ ಗಂಗಡಿಕಾರ ವಕ್ಕಲಿಗರ ಜಾತಿ ಕೊಪ್ಪಲ್ ಮರಿಗೌಡನ ಮಗ 35 ವರುಷದ ಜಿರಾಯತು ಕಸಬಿನ ವೆಂಕಟಗಿರಿಗೌಡ	ಕನ್ನಂಬಾಡಿ ಕಸಬಾ ಗ್ರಾಮದಲ್ಲಿರುವ ಗಂಗಡಿಕಾರ ವಕ್ಕಲಿಗರ ಜಾತಿ ಕೊಮಾರಿ ಕೃಷ್ಣಪ್ಪನ ಮರಿಗೌಡನ ಮಗ 21 ವರುಷದ ಜಿರಾಯಿತು ಕಸಬಿನ ಕೃಷ್ಣೇಗೌಡ	25—5—85	27—5—85	28—5—85	ಕನ್ನಂಬಾಡಿ ನಾಲಾಕೆರೆ ಕೆಳಗೆ ನನ್ನ ಅಂಣನ ಹೆಸರಿಗೂ ನನ್ನ ಹೆಸರಿಗೂ ಜಂಪ್ಟಿಪಟ್ಟೀಯಾಗಿ ಬರುವ ತಾರೆಜಂತದಲ್ಲಿ ಯಿರುವ ಪೂರ್ವಕ್ಕೆ ವೆಂಕಟಕೃಷ್ಣಶಾಸ್ತ್ರಿಗಳ ಗದ್ದೆ, ದಕ್ಷಿಣಕ್ಕೆ ಕಾವೇರಿ ಏರಿ, ಪಶ್ಚಿಮಕ್ಕೆ ಡಿಟೋ ವೆಂಕಟಕೃಷ್ಣಶಾಸ್ತ್ರಿಗಳ ಗದ್ದೆ, ಉತ್ತರಕ್ಕೆ ಅಲಿಮನೆ ತಿಟ್ಟು ಈಮಧ್ಯೆ ಇರುವ ನಂಬರ್ 150ನೇ ಜೀಜವರೀ 0—5—4 ಕಂದಾಯ 3—6—0 ವುಳ್ಳ ತಾಕು ವೊಂದು, ಪೂರ್ವಕ್ಕೆ ವೆಂಕಟಕೃಷ್ಣಶಾಸ್ತ್ರಿಗಳ ಗದ್ದೆ ದಕ್ಷಿಣಕ್ಕೆ ನಮ್ಮ ಗದ್ದೆ ರಾಮಚಿಕ್ಕ ವೆಂಕಟೇಗೌಡನ ಗದ್ದೆ, ಪಶ್ಚಿಮಕ್ಕೆ ಡಿಟೋ ಚಿಕ್ಕ ವೆಂಕಟೇಗೌಡನ ಗದ್ದೆ, ಉತ್ತರಕ್ಕೆ ನೀರು ಹೋಗುವ ಹಿಕ್ಕಲು, ಈ ಮಧ್ಯೆ ಇರುವ ನಂಬರ್ 15ನೇ ಜೀಜವರೀ 3 ಕಂದಾಯ 1 ವುಳ್ಳ ತಾಕು ವೊಂದು ಜಮ್ಲಾಯ ಎರಡು ತಾಕು ಗದ್ದೆಗಳನ್ನೂ ನಿನಗೆ ಕ್ರಯಕ್ಕೆ ಕೊಟ್ಟು 200 ರೂಪಾಯಿಗಳು ತೆಗದುಕೊಂಡು ಕೊಟ್ಟಿರುತ್ತೇನೆಂದು

ಡಿ. ದೇವರಾಜೇ ಅರಸು,
ರಿಜಿಸ್ಟ್ರಾರ್.

ಖಾಸಗೀ ನೋಟೀಸುಗಳು.

ಶಿವಮೊಗ್ಗಾ ಲೈಫ್ ಇನ್‌ಷುರೆನ್ಸ್ ಕಂಪೆನಿ ಲಿಮಿಟೆಡ್ ಆಫೀಸಿನಿಂದ.

ಈಕಂಪೆನಿ ಪೇರುದಾರ್ರುಗಳಿಗೆ ತಿಳಿಸುವದೇನಂದರೆ, ಈ ಕಂಪೆನಿಯನ್ನು 1887ನೇ ಇಸವಿ ಜನರಲ್ ಮೀಟಿಂಗಿನಲ್ಲಿ ನಿರ್ಣಯವಾದಂತೆ ಪುನಹ ಪೂರ್ತಿಯಾಗಿ ತಾರೀಖು 21—4—87ನೇ ಲಾಗಾಯತು ಮುಚ್ಚಿ ಬಿಟ್ಟು ಯಿದೆ.

ಕಂಪೆನಿಗೆ ಜಮೆಯಾದ ಹಣದಲ್ಲಿ ಖರ್ಚುಕಳದು ತಯಾರಾಗುವ ಲಿಖ್ತದಂತೆ ದಾಮಾಷಾಯಿ ಮೇರಿಗೆ ನಿಮ್ಮಿಗಳಿಗೆ ಸಲ್ಲಬೇಕಾಗುವ ಮೊಬಲಗನ್ನ ಈ ತಾರೀಖು ಲಾಗಾಯತು 6 ತಿಂಗಳು ವಳಗಾಗಿ ಹಾಜರಾಗಿ ಪಡಕೊಳ್ಳತಕ್ಕದ್ದು.

ತಾರೀಖು 15ನೇ ಜುಲೈ 1887ನೇ ಇಸವಿ. ಕೂದವಳ್ಳಿ ಪುಟ್ಟಯ್ಯ, ಪ್ರೊಸ್ಯೂಟರ್.

ತಾರೀಖು 17ನೇ ಜುಲೈ 1887.

ಕೊರಟಗೆರೆ ಗಂಗಾಧರೇಶ್ವರನ ಬ್ಯಾಂಕು ಲಿಮಿಟೆಡ್‌ನ ಯೇಜಂಟ್ ಚನ್ನವೀರಯ್ಯ ತಿಳಿಸುವದೇನಂದರೆ, ಕೊರಟಗೆರೆ ಗಂಗಾಧರೇಶ್ವರನ ಬ್ಯಾಂಕ್ ಲಿಮಿಟೆಡ್ ಬಾಬತು ಡಿಸ್ಕೌಂಟು ವಗೈರೇ ಸ್ವತ್ತನ್ನ ಸ್ಯ 1887ನೇ ಇಸವಿ ಆಗಸ್ಟ್ ತಾರೀಖು 1ರಲ್ಲು ಕೊರಟಗೆರೆ ಪೇಟೇಲಿರುವ ಚನ್ನಪ್ಪಯ್ಯನವರ 168ನೇ ನಂಬರ್ ಅಂಗಡಿಮುಂದೆ ದಿವಿ 10 ಘಂಟೆ ಲಾಗಾಯತು ಸಾಯಂಕಾಲ 5 ಘಂಟೆವರಿಗೂ ನಗದು ಮೊಬಲಗ್ಯೆ ಹರಾಜು ಮಾಡುತ್ತೆ. ಯೇಜಂಟ್ ಚನ್ನವೀರಯ್ಯನ ರುಜು.

ಹಾಸನ ಡಿಸ್ಟ್ರಿಕ್ಟು.

ತಾರೀಖು 12ನೇ ಜುಲೈ 1887.

ಇದರಿಂದ ಸಂಬಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೇಲೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತೈವಜನ್ನು ಹಾಜರ್ಮಾಡಿದವರೇಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೇಆಗಲಿ ಈ ನೋಟೀಸು ತಾರೀಖು ಲಾಗಾಯಿತು ವೊಂದು ತಿಂಗಳುವಳಗಾಗಿ ಬೇಲೂರು ಸಬ್ ರಿಜಿಸ್ಟ್ರಾರ್‌ರಲ್ಲಿ ಹಾಜರಾಗಿ ಸದರೀ ದಸ್ತೈವಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುವದು.

ನಂಬರ್.	ದಸ್ತೈವಜನ್ನು ರಿಜಿಸ್ಟರ್ ಮಾಡಿಸಿದ ತಾರೀಖು.	ದಸ್ತೈವಜನ್ನು ರಿಜಿಸ್ಟರ್ ಮಾಡಿಸಲು ಬಂದ ತಾರೀಖು.	ದಸ್ತೈವಜನ್ನು ಬರ ದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನು ಬರೆಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	27—5—85	27—5—85	ನಾರೆ ಫರ್ಕಾ ಶಾನುಭೋಗ ಬಂದಪ್ಪಯ್ಯನವರ ಹೆಂಡತಿ ಹೊನ್ನಮ್ಮ	ಸಕಲೇಶಪುರದಲ್ಲಿರುವ ಕೋಳೂರು ಪುಟ್ಟಯ್ಯನವರ ಮಗ ಆರ್ ಹಳ್ಳಿ ಶೇಕದಾರ್ ಸೀತಾರಾಮಯ್ಯ	ಯಾವ ದ್ವಿಷ್ಟ ಆಸ್ತಿ ವಿಚಾರಣೆ ವ್ರದ್ಧಿ ವಸೂಲಿ ದಾವಾ ವಗೈರೆ ಬಗ್ಗೆ ಸರ್ವಾಧಿಕಾರ ವಹಿಸಿರುವ ಪತ್ರ.
1885—86		28—5—85			

ಪಿ. ಯೂ. ಪೂರ್ಣಯ್ಯ,
ರಿಜಿಸ್ಟ್ರಾರ್.

ತಾರೀಖು—ನೇ ಜುಲೈ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟಿನಲ್ಲಿರತಕ್ಕ ಕೆಲವು ಕಾಫೀ ತೋಟಗಳ ಮೇಲೆ ಬರಬೇಕಾದ ಕಂದಾಯದ ಬಾಕಿ ಅದ್ಯಾಪಿ ವಾವತೀ ಆಗದೆ ಇರುವದರಿಂದ ಹರಾಜು ಮಾಡುವ ತಾರೀಖಿಗೆ ಹಿಂದಿನ ಅಥವಾ ಆ ತಾರೀಖು ವಳಗಾಗಿ ಸದರೀ ಕಂದಾಯ ಬಾರದೇ ಹೋದರೆ ಸ್ಟೇಟ್‌ಮೆಂಟಿನಲ್ಲಿ ನಮೂದಾಗತಕ್ಕ ಸ್ಥಳ ಮತ್ತು ತಾರೀಖುಗಳಲ್ಲಿ ಸದರೀ ಯಸ್ಟೇಟುಗಳು ಹರಾಜು ಮಾಡಲ್ಪಡುವವು.